ಕಾವ್ಯಸಂಕ



ಆರಿಫ್ ರಾಜಾ

# ದುಡಿದ ಅನ್ನವನ್ನು ಹಂಚಿ ತಿನ್ನುತ್ತೇವೆ

ಕವಯಿತ್ರಿ ಅಬೆಡಿ ಮಿರಿಯಲ್ ಇನ್ನೂ ವಿದ್ಯಾರ್ಥಿನಿ. ಸ್ವಹಿಲಿ ತಾಯ್ನುಡಿಯ ಬಂಗುಬಂಗು ಬುಡಕಟ್ಟು ಸಮುದಾಯಕ್ಕೆ ಸೇರಿದವರು. ಕಳೆದ ವರ್ಷ ಜೂನ್‌ನಲ್ಲಿ ಜೂನಿಯರ್ ಪರೀಕ್ಷೆಗೆ ಕುಳಿತಿದ್ದಾರೆ. DR ಕಾಂಗೋದ ಯುವಿರಾ ಪ್ರಾಂತ್ಯದಲ್ಲಿ 18 ನೇ ಸೆಪ್ಟೆಂಬರ್ 2006 ರಂದು ಜನಿಸಿದ ಅಬೆಡಿ ಮಿರಿಯಲ್ ಸದ್ಯ ಮಲಾವಿ ದೇಶದ ಝುಯೆಕಾ ರೆಫ್ಯೂಜಿ ಕ್ಯಾಂಪಿನ ನಿವಾಸಿಯಾಗಿದ್ದು, ಅಲ್ಲಿಯ African youth Artistic poetry (AYAP) ಯ ಸಕ್ರಿಯ ಸದಸ್ಯರಾಗಿದ್ದಾರೆ.

ಅಂತರ್ಯುದ್ಧ ಹಾಗೂ ಜನಾಂಗೀಯ ಕಲಹಗಳಂತಹ ಸಮಾಜೋ ರಾಜಕೀಯ ಕಾರಣಗಳಿಗಾಗಿ ಗುಳೆ ಎಬ್ಬಿಸಲ್ಪಟ್ಟಿರುವ ಇವರು ತಮ್ಮ ಬರಹಗಳಲ್ಲಿ ಡಯೊಸ್ಪೋರಿಕ್ ಅನುಭವಗಳನ್ನು ದಾಖಲಿಸಲು ಯತ್ನಿಸುತ್ತಾರೆ. ಅವರೇ ಹೇಳಿಕೊಂಡ ಹಾಗೆ 'ನಿರಾಶ್ರಿತರ ಶಿಬಿರದ ಮಕ್ಕಳು ಮತ್ತು ಮಹಿಳೆಯರನ್ನು ಹುರಿದುಂಬಿಸಲು ಹಾಡುಕವನ ರಚಿಸುತ್ತಾರೆ'

ಅಬೆಡಿ ಮಿರಿಯಲ್ ಅವರದು ಇನ್ನೂ ಸಣ್ಣ ವಯಸ್ಸು. ಇದು ಇವರ ಮೊದಲ ಅಧಿಕೃತ ಸಂದರ್ಶನವೂ ಆಗಿರುವುದರಿಂದ,ಮುಖ್ಯ ಪ್ರಶ್ನೆಗಳ ಜೊತೆಗೆ ಬಿಡಿ ಬಿಡಿಯಾದ ಉಪ ಪ್ರಶ್ನೆಗಳನ್ನು ಕೇಳಿ,ಅನಂತರ ಅಗತ್ಯ ಮಾಹಿತಿ ಕಲೆಹಾಕಿ,ಒಂದಕ್ಕೊಂದು ಜೋಡಿಸಿ ಅಂತಿಮವಾಗಿ ಸಂದರ್ಶನದ ರೂಪ ನೀಡಲಾಯಿತು.ಇಂಥ ನತದೃಷ್ಟರ ಅಸಹಾಯಕ ಅನುಭವಗಳನ್ನು ಕೇಳಿದಾಗ,ಬರಹದ ಬಗ್ಗೆ ಲಕ್ಷುರಿಯಾಗಿ ಮಾತನಾಡುವ ನಮ್ಮಂಥವರಿಗೆ,ಪ್ರತಿಭೆ ಎಂಬುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಪ್ರಾತಿನಿಧ್ಯ ಅನ್ನುವುದು ಮತ್ತೆ ಮತ್ತೆ ಮನದಟ್ಟಾಗುತ್ತಾ ಹೋಗುತ್ತದೆ.



ಯುವ ಕವಯಿತ್ರಿ:
**ಅಬೆಡಿ ಮಿರಿಯಲ್**
ದೇಶ:
**ಪೂರ್ವ ಆಫ್ರಿಕಾದ ಮಲಾವಿ**